ಧ್ವನಿ, ಹಾವ ಭಾವ, ಹೆಚ್ಚು ಮೇಕಪ್ಪುಗಳಿಲ್ಲದ ನನ್ನನ್ನು ಗುರುತು ಹಿಡಿಯುವುದು ಅಪ್ಪನಿಗೆ ಕಷ್ಟವೇನೂ ಆಗಲಿಲ್ಲ. ಪ್ರದರ್ಶನ ಮುಗಿಯುವವರೆಗೆ ಮೌನವಾಗಿದ್ದ ಅಪ್ಪ ಮನೆಗೆ ಬಂದವರೇ ನನಗೆ ಚೆನ್ನಾಗಿ ಬಾರಿಸಿದರು. 'ಮನೆತನಕ್ಕೆ ಮಾತ್ರವಲ್ಲ, ನಮ್ಮ ಸಮುದಾಯಕ್ಕೇ ಅವಮಾನ ಮಾಡುತ್ತಿದ್ದಿ. ನೀನು ಏನೂ ಸಾಧನೆ ಮಾಡದೇ ಇದ್ದರೂ ಪರವಾಗಿಲ್ಲ. ಇಂಥಾ ಕೆಲಸಗಳಿಗೆ ಇಳಿಯಬೇಡ' ಎಂದು ತಾಕೀತು ಮಾಡಿದರು. ಅಂದಿನ ಕಾಲದಲ್ಲಿ ಈ ಭಾಗವತ ಮೇಳಗಳಲ್ಲಿ ತಿರುಗಾಟ ಮಾಡುವುದು ಮನೆತನಕ್ಕೆ ಅವಮಾನಕರ ವಿಷಯವಾಗಿತ್ತು. ರೆಡ್ಡಿ ಕುಟುಂಬವೆಂದರೆ ಜಮೀನುದಾರಿ ಕುಟುಂಬವಾಗಿದ್ದು, ಇಂತಹ ಕಲಾಪ್ರದರ್ಶನಗಳನ್ನು ಆಯೋಜಿಸಬೇಕೇ ವಿನಾ, ಕುಟುಂಬಿಕರೇ ಅದರಲ್ಲಿ ಹೋಗಿ ಪಾತ್ರ ಮಾಡುವುದು ಪ್ರತಿಷ್ಠೆಗೆ ಕುಂದಾಗಿತ್ತು. ನಮ್ಮ ಪುರಾಣ ಕಥೆಗಳ ಬಗ್ಗೆ ಶ್ರದ್ಧೆಯಿರುವುದರಿಂದ ಬಿಡುವಿನ ವೇಳೆಯಲ್ಲಿ ಅವುಗಳನ್ನು ಕೇಳಬೇಕೇ ಹೊರತು, ಬದುಕನ್ನೇ ಅದಕ್ಕೆ ಮೀಸಲಿಡುವುದು ಸರಿಯಲ್ಲ ಎಂಬ ಭಾವನೆ ನಮ್ಮ ಮನೆತನದಲ್ಲಿಯೂ ಇತ್ತು. ರಾಧಾಳ ತಂದೆ ಆಗೀಗ ಭಾಗವತ ಮೇಳದಲ್ಲಿ ಭಾಗವಹಿಸುತ್ತಿದ್ದರಾದರೂ, ಅದನ್ನೆಲ್ಲ ಗೌರವದ ಕೆಲಸವೆಂದು ಪರಿಗಣಿಸುತ್ತಿರಲಿಲ್ಲ. ಆದರೇನು ಮಾಡೋಣ, ನನಗೆ ಈ ಭಾಗವತ ಮೇಳವೆಂದರೆ ಹುಚ್ಚು ಹಿಡಿಯುವಷ್ಟು ಇಷ್ಟವಾಗಿತ್ತು. ನನ್ನ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದ ಅಪ್ಪ, ನನ್ನನ್ನು ಊರು ಬಿಡಿಸುವ ನಿರ್ಧಾರ ಮಾಡಿದರು. ಪಕ್ಕದ ನಿರ್ಮಲ್ ಎಂಬ ಊರಿಗೆ (ಈಗ ಅದು ತೆಲಂಗಾಣದಲ್ಲಿ ಒಂದು ಜಿಲ್ಲೆಯಾಗಿದೆ) ನನ್ನನ್ನು ಕಳುಹಿಸಿ, ಅಲ್ಲಿ ಶಾಲೆಗೆ ಹೋಗುವಂತೆ ವ್ಯವಸ್ಥೆ ಮಾಡಿದರು. ಆ ಊರಿನಲ್ಲಿ ಭಾಗವತ ಮೇಳ ಇರಲಿಲ್ಲವೆಂಬುದು ಅಪ್ಪನಿಗೆ ಸಮಾಧಾನದ ವಿಷಯವಾಗಿತ್ತು. ಆ ಊರಿನಲ್ಲಿ ಒಂದು ಸಿನಿಮಾ ಥಿಯೇಟರ್ ಇತ್ತಷ್ಟೆ. ನನ್ನ ಪುಣ್ಯವೇನೋ, ಈ ಕೂಚಿಪುಡಿಯ ಯೋಗವನ್ನು ದೇವರು ಕರುಣಿಸಿರಬೇಕೆನಿಸುತ್ತದೆ. ಆ ಸಣ್ಣ ಸಿನಿಮಾ ಥಿಯೇಟರ್‌ಗೆ ಒಮ್ಮೆ ವೈಜಯಂತಿ ಮಾಲಾ ಅವರು ನಟಿಸಿದ, ನರ್ತಿಸಿದ 'ನಾಗಿನ್' ಸಿನಿಮಾ ಬಂತು. ಆ ಊರಿನಲ್ಲಿ ಬಹುಶಃ 17 ದಿನಗಳ ಕಾಲ ಈ ಚಿತ್ರ ಪ್ರದರ್ಶನವಿತ್ತು. ಅಷ್ಟೂ ದಿನಗಳು ನಾನು ಥಿಯೇಟರ್‌ಗೆ ಹೋಗಿ ಆ ಚಿತ್ರವನ್ನೂ, ಅದರಲ್ಲಿ ವೈಜಯಂತಿಮಾಲಾ ಅವರ ನೃತ್ಯವನ್ನೂ ನೋಡಿದೆ. ಅದೆಷ್ಟು ಸುಂದರವಾದ ಡಾನ್ಸ್. ಆಕೆಯ ಭರತನಾಟ್ಯವನ್ನು ನೋಡುವುದೆಂದರೆ ಅದೊಂದು ಹಬ್ಬವೇ. ಅಂದು ಥಿಯೇಟರ್‌ನಲ್ಲಿ ನೋಡಿದ ಹಾಡನ್ನು ಆ ಹದಿನೇಳು ದಿನಗಳಲ್ಲಿ ಅಭ್ಯಾಸ ಮಾಡಿ, ಯಥಾವತ್ ಹೇಗೆ ಮಾಡುವುದೆಂದು ನಾನು ಕಲಿತೆ. ನಂತರ ಶಾಲಾ ವಾರ್ಷಿಕೋತ್ಸವದಲ್ಲಿ, ಇತರ ಕೆಲವು ಕಾರ್ಯಕ್ರಮಗಳಲ್ಲಿ ನಾನು ನರ್ತಿಸಿದ್ದೇ ನರ್ತಿಸಿದ್ದು.

**◆ ಈ ದಾರಿಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಎಂದಾದರೂ ಬೇಸರ ಪಟ್ಟಿದ್ದುಂಟಾ ?**

ಇಲ್ಲ ಇಲ್ಲ. ಏಳುಬೀಳುಗಳನ್ನು ಕಾಣಬೇಕಾಯಿತೆಂಬುದು ನಿಜ. ಅದರಿಂದ ಬದುಕನ್ನು ಬಂದ ಹಾಗೆ ಎದುರಿಸುವ ಛಾತಿ ಸಿದ್ಧಿಯಾಯಿತು. ಇದೇ ದಾರಿಯಲ್ಲಿ ನನಗೆ ಮಾನ ಸಮ್ಮಾನಗಳು ದೊರೆತಿವೆ. ಪದ್ಮಶ್ರೀ, ಪದ್ಮಭೂಷಣ ಗೌರವಗಳು ದೊರೆತಿವೆ. ಮನಸ್ಸಿಗೆ ಇಷ್ಟವಾದ ಕೆಲಸವನ್ನು ಮಾಡುವುದಕ್ಕೆ ಬೇಕಾದ ಶಕ್ತಿಯನ್ನು ಮನಸ್ಸೇ ಹೊಂದಿಸಿಕೊಳ್ಳುತ್ತದೆ. ಯಾವುದೇ ನೃತ್ಯವನ್ನು ಕಲಿಯಬೇಕಾದರೂ ಆ ವ್ಯಕ್ತಿಯ ಪಂಚೇಂದ್ರಿಯಗಳು ಶುದ್ಧವಾಗಿರಬೇಕು. ಅದು ಶ್ರದ್ಧೆಯನ್ನು ಬೇಡುತ್ತದೆ. ಒಮ್ಮೆ ನೃತ್ಯ ಕಲಿಯುವುದಕ್ಕೆ ಶುರುಮಾಡಿದರೆ, ಕಲಾವಿದನು ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಅದು ಒಲಿಯುತ್ತದೆ. ಸಾಮಾನ್ಯವಾಗಿ ನಾವು ಗಣಪತಿ ವಂದನೆ, ಜತಿಸ್ವರ, ಭಾಮಾ ಕಲಾಪ, ಅಷ್ಟಪದಿ ಮುಂತಾದವುಗಳಾದ ಮೇಲೆ ಹಿತ್ತಾಳೆ ಹರಿವಾಣದ ಅಂಚಿನಮೇಲೆ ನಿಂತು 'ತರಂಗಂ' ಅನ್ನು ಪ್ರಸ್ತುತಪಡಿಸುತ್ತೇವೆ. ಈ ಕ್ರಮಾನುಗತ ಪ್ರದರ್ಶನಕ್ಕೊಂದು ಅರ್ಥವಿದೆ. ದೇವರನ್ನು ಸ್ತುತಿಸುತ್ತ ಆರಂಭವಾಗುವ ನೃತ್ಯವು, ದೇವರ ಲೀಲೆಯನ್ನು ಕೊಂಡಾಡುತ್ತಾ ಕೊನೆಗೆ ಹರಿವಾಣದ ಮೇಲೆ ನಿಂತು ನೃತ್ಯವನ್ನು ಆರಂಭಿಸುತ್ತೇವೆ. 'ತರಂಗಂ' ಎಂದರೆ ಅಲೆಗಳು. ಇಲ್ಲಿ ಹೆಚ್ಚಾಗಿ ನಾವು ನಾರಾಯಣತೀರ್ಥ ಯತಿಗಳು ರಚಿಸಿದ ವಿಷ್ಣು ಸ್ತುತಿಯನ್ನೇ ಕೈಗೆತ್ತಿಕೊಳ್ಳುತ್ತೇವೆ. ಕವಿಗಳಾದ